ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 185 (1377)
2. ಸದಸ್ಯರ ಹೆಸರು : ಶ್ರೀ ಅರವಿಂದ ಕುಮಾರ ಅರಳಿ (ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು)
3. ಉತ್ತರಿಸುವ ದಿನಾಂಕ : 16.03.2021
4. ಉತ್ತರಿಸುವ ಸಚಿವರು : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
(ಅ)	ಬೀದರ್ ಜಿಲ್ಲೆಯಲ್ಲಿ ಕೆ.ಐ.ಎ.ಡಿ.ಬಿ. ವತಿಯಿಂದ ಹಂಚಿಕೆಯಾದ ಫ್ಲಾಟ್.ಗಳ ಸಂಖ್ಯೆ ಎಷ್ಟು; ಇದರಲ್ಲಿ ಮಹಿಳೆಯರಿಗೆ ಸೀಮಿತಗೊಳಿಸಿ ಹಂಚಿಕೆ ಮಾಡಲಾದ ಫ್ಲಾಟ್.ಗಳ ಸಂಖ್ಯೆ ಎಷ್ಟು; ಲೀಸ್.ನಲ್ಲಿ ಇರುವ ಫ್ಲಾಟ್.ಗಳ ಸಂಖ್ಯೆ ಎಷ್ಟು; (ವಿವರವಾದ ಮಾಹಿತಿ ನೀಡುವುದು)	ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ವತಿಯಿಂದ ಬೀದರ್ ಜಿಲ್ಲೆಯಲ್ಲಿ ಹಂಚಿಕೆಯಾದ ಕೈಗಾರಿಕಾ ಪ್ರದೇಶವಾರು ನಿವೇಶನಗಳ ವಿವರ ಈ ಕೆಳಕಂಡಂತಿದೆ:-

ಕ್ರ. ಸಂ	ಕೈಗಾರಿಕಾ ಪ್ರದೇಶ	ಹಂಚಿಕೆ ಮಾಡಲಾದ ನಿವೇಶನಗಳ ಸಂಖ್ಯೆ
1.	ನೌಬಾದ	68
2.	ನೌಬಾದ ಆಟೋನಗರ 1ನೇ ಹಂತ	199
3.	ನೌಬಾದ ಆಟೋನಗರ 2ನೇ ಹಂತ	231
4.	ಕೋಲ್ಹಾರ 1ನೇ ಹಂತ	304
5.	ಕೋಲ್ಹಾರ 2ನೇ ಹಂತ	126
6.	ಹುಮನಾಬಾದ್	175
7.	ಬಸವಕಲ್ಯಾಣ	85
8.	ಬಸವಕಲ್ಯಾಣ ಆಟೋನಗರ	199
	ಒಟ್ಟು	1387

ಮೇಲ್ಕಂಡ ಕೈಗಾರಿಕಾ ಪ್ರದೇಶಗಳಲ್ಲಿ ಮಹಿಳೆಯರಿಗೆ ಸೀಮಿತಗೊಳಸಿ ಹಂಚಿಕೆ ಮಾಡಲಾದ ನಿವೇಶನಗಳು ಇರುವುದಿಲ್ಲ.

ಆದರೆ, ಸದರಿ ಕೈಗಾರಿಕಾ ಪ್ರದೇಶಗಳಲ್ಲಿ ಒಟ್ಟು 1387 ನಿವೇಶನಗಳ ಪೈಕಿ 148 ನಿವೇಶನಗಳನ್ನು ಮಹಿಳಾ ಉದ್ಯಮಿದಾರರಿಗೆ ಈ ಕೆಳಕಂಡಂತೆ ಹಂಚಿಕೆ ಮಾಡಲಾಗಿದೆ :-

ಕ್ರ. ಸಂ	ಕೈಗಾರಿಕಾ ಪ್ರದೇಶ	ಹಂಚಿಕೆ ಮಾಡಲಾದ ನಿವೇಶನಗಳ ಸಂಖ್ಯೆ
1.	ನೌಬಾದ	9
2.	ನೌಬಾದ ಆಟೋನಗರ 1ನೇ ಹಂತ	52
3.	ನೌಬಾದ ಆಟೋನಗರ 2ನೇ ಹಂತ	2
4.	ಕೋಲ್ಹಾರ 1ನೇ ಹಂತ	22
5.	ಕೋಲ್ಹಾರ 2ನೇ ಹಂತ	23
6.	ಹುಮನಾಬಾದ್	18
7.	ಬಸವಕಲ್ಯಾಣ	8
8.	ಬಸವಕಲ್ಯಾಣ ಆಟೋನಗರ	14
	ಒಟ್ಟು	148

ಹಂಚಿಕೆ ಪಡೆದ ಒಟ್ಟು ನಿವೇಶನಗಳಲ್ಲಿ, ಲೀಸ್‌ನಲ್ಲಿರುವ ನಿವೇಶನಗಳ ವಿವರ ಈ ಕೆಳಕಂಡಂತಿದೆ:-

ಕ್ರ. ಸಂ	ಕೈಗಾರಿಕಾ ಪ್ರದೇಶ	ಹಂಚಿಕೆ ಮಾಡಲಾದ ನಿವೇಶನಗಳ ಸಂಖ್ಯೆ
1.	ನೌಬಾದ	11
2.	ನೌಬಾದ ಆಟೋನಗರ 1ನೇ ಹಂತ	74

		3.	ನೌಬಾದ ಆಟೋನಗರ 2ನೇ ಹಂತ	231
		4.	ಕೋಲ್ಹಾರ 1ನೇ ಹಂತ	127
		5.	ಕೋಲ್ಹಾರ 2ನೇ ಹಂತ	123
		6.	ಹುಮನಾಬಾದ್	108
		7.	ಬಸವಕಲ್ಯಾಣ	58
		8.	ಬಸವಕಲ್ಯಾಣ ಆಟೋನಗರ	184
			ಒಟ್ಟು	916
(ಆ)	ಮಹಿಳಾ ಉದ್ಯಮ ಪಾರ್ಕ್ ಪ್ರಕ್ರಿಯೆ ಯಾವ ಹಂತದಲ್ಲಿದೆ, ಇದು 2020-21ನೇ ಸಾಲಿನಲ್ಲಿ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದೇ:	ದಿನಾಂಕ: 30.01.2021ರಂದು ನಡೆದ ಕೆಐಎಡಿಬಿ ಮಂಡಳಿ ಸಭೆಯಲ್ಲಿ ಬೀದರ ಜಿಲ್ಲೆಯ ಕೋಲ್ಹಾರ ಕೈಗಾರಿಕಾ ಪ್ರದೇಶದ 2ನೇ ಹಂತದಲ್ಲಿ ಮಹಿಳಾ ಉದ್ಯಮ ಪಾರ್ಕ್ ನಿರ್ಮಿಸುವ ಸಲುವಾಗಿ 42.57 ಎಕರೆ ಪ್ರದೇಶದ ವಿನ್ಯಾಸ ನಕ್ಷೆ ಮತ್ತು ವೆಚ್ಚ ರಚನೆಗೆ ಆಡಳಿತಾತ್ಮಕ ಅನುಮೋದನೆ ಮತ್ತು ಆರ್ಥಿಕ ಮಂಜೂರಾತಿ ನೀಡಲಾಗಿದ್ದು, ಅಭಿವೃದ್ಧಿ ಕಾಮಗಾರಿಯನ್ನು ರೂ. 13.93 ಕೋಟಿ ವೆಚ್ಚದಲ್ಲಿ ಕೈಗೊಳ್ಳಲು ಕ್ರಮವಹಿಸಲಾಗುತ್ತಿದೆ.		
(ಇ)	ಮಹಿಳಾ ಉದ್ದಿಮೆದಾರರಿಗೆ New Industrial Policy ಯಲ್ಲಿ ನೀಡಲಾಗುತ್ತಿರುವ ಸೌಲಭ್ಯಗಳಾವುವು?	2020-25ನೇ ಸಾಲಿನ ಕೈಗಾರಿಕಾ ನೀತಿಯನ್ವಯ ಎಂಎಸ್ಎಂಇ ಮಹಿಳಾ ಉದ್ಯಮಿದಾರರಿಗೆ ಈ ಕೆಳಕಂಡ ರಿಯಾಯಿತಿ ಹಾಗೂ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. i. ಬಂಡವಾಳ ಹೂಡಿಕೆ ಸಹಾಯಧನ ii. ಮುದ್ರಾಂಕ ಶುಲ್ಕ ವಿನಾಯಿತಿ ಹಾಗೂ ನೋಂದಣಿ ಶುಲ್ಕದಲ್ಲಿ ರಿಯಾಯಿತಿ iii. ಭೂ ಪರಿವರ್ತನಾ ಶುಲ್ಕ ಮರುಪಾವತಿ iv. ವಿದ್ಯುತ್ ಶುಲ್ಕದ ಮೇಲೆ ತೆರಿಗೆ ವಿನಾಯಿತಿ		

		v. ವಿದ್ಯುಚ್ಛಕ್ತಿ ಸಬ್ಸಿಡಿ vi. ಇಟಿಪಿ ಸಬ್ಸಿಡಿ vii. ತಂತ್ರಜ್ಞಾನ ಮೇಲ್ದರ್ಜೆಗೇರಿಸುವ ಸಾಲದ ಮೇಲೆ ಬಡ್ಡಿ ಸಹಾಯಧನ viii. ಮಳೆ ನೀರು ಕೊಯ್ಲು ಹಾಗೂ ತ್ಯಾಜ್ಯ ನೀರು ಸಂಸ್ಕರಣೆಗೆ ಸಹಾಯಧನ, ಇತ್ಯಾದಿ.

ಸಂಖ್ಯೆ: ಸಿಐ 75 ಐಎಪಿ (ಇ) 2021

(ಜಗದೀಶ ಶೆಟ್ಟರ)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು